International Journal of Kannada Research 2018; 4(3): 165-168

International Journal of Kannada Research
www.kannadajournal.com

**ISSN: 2454–5813**
IJKR 2018; 4(3): 165-168
© 2018 IJKR
www.kannadajournal.com
Received: 18-05-2018
Accepted: 20-06-2018

**ಡಾ. ಸಾವುಕಾರ ಎಸ್. ಕಾಂಬಳ**
ಪೂರ್ಣಕಾಲಿಕ ಅತಿಥಿ
ಉಪನ್ಯಾಸಕರು, ಸಂಗೊಳ್ಳಿ
ರಾಯಣ್ಣ ಪ್ರಥಮ ದರ್ಜೆ ಘಟಕ
ಮಹಾವಿದ್ಯಾಲಯ, ಬೆಳಗಾವಿ

**Correspondence**
**ಡಾ. ಸಾವುಕಾರ ಎಸ್. ಕಾಂಬಳ**
ಪೂರ್ಣಕಾಲಿಕ ಅತಿಥಿ
ಉಪನ್ಯಾಸಕರು, ಸಂಗೊಳ್ಳಿ
ರಾಯಣ್ಣ ಪ್ರಥಮ ದರ್ಜೆ ಘಟಕ
ಮಹಾವಿದ್ಯಾಲಯ, ಬೆಳಗಾವಿ

# ಕಲಬುರ್ಗಿ ಜಿಲ್ಲೆಯ ಉರಿಲಿಂಗಪೆದ್ದಿ ಮಠಗಳ ಇತಿಹಾಸ

**ಡಾ. ಸಾವುಕಾರ ಎಸ್. ಕಾಂಬಳ**

ಉರಿಲಿಂಗಪೆದ್ದಿ ಸಂಪ್ರದಾಯದ ಲಿಂಗಾಯತ ಅಸ್ಪೃಶ್ಯರ ಹೃದಯಭಾಗಗಳೆನಿಸಿವೆ, ಅವರ ಮಠಗಳು. ಕೆಲವು ಮಠಗಳು ಶರಣರ ಕಾಲದಲ್ಲಿ ಸ್ಥಾಪನೆಗೊಂಡರೂ ಕಾಲಗರ್ಭದಲ್ಲಿ ಸಿಕ್ಕು ನಾಶವಾಗಿ ಮತ್ತೆ ಕೋಡ್ಲಾ ಗ್ರಾಮದ ಶ್ರೀ ಶಿವಯೋಗಿಗಳ ಕಾಲದಲ್ಲಿ ಹಳೆಯ ಮಠಗಳು ಜೀವಂತಿಕೆ ಪಡೆದವು. ೧೨ ನೆಯ ಶತಮಾನದ ನೆನಪನ್ನು ಪುನರುಜ್ಜೀವನಗೊಳಿಸುವ ರೀತಿಯಲ್ಲಿ ಗುಲಬುರ್ಗಾ ಮತ್ತು ಬೀದರ ಜಿಲ್ಲೆಯ ಪರಿಸರದಲ್ಲಿ ಈ ಸಂಪ್ರದಾಯದಲ್ಲಿ ಹೊಸ ಮಠಗಳೂ ಹುಟ್ಟಿಕೊಂಡವು. ಸೇಡಂ ತಾಲೂಕಿನ ಕೋಡ್ಲಾ ಗ್ರಾಮದಲ್ಲಿ ಸುಮಾರು ೨೫೦ ವರ್ಷಗಳ ಹಿಂದೆ ಹುಟ್ಟಿಕೊಂಡಿರುವ 'ಶ್ರೀ ಉರಿಲಿಂಗಪೆದ್ದೀಶ್ವರ ಮಹಾಸಂಸ್ಥಾನ ಮಠ'ಕ್ಕೆ ಜೀವ ತುಂಬಿದವರು ಶ್ರೀ ಶಿವಯೋಗಿಸ್ವಾಮಿಗಳು. ಇದರ ಶಾಖೆಗಳು ದಕ್ಷಿಣ–ಉತ್ತರ–ಮಧ್ಯ ಕರ್ನಾಟಕದಲ್ಲಿ ಹೀಗೆ ಹರಡಿ ನಿಂತಿವೆ. ಇಲ್ಲಿ ಗುಲಬುರ್ಗಾ ಮಠಗಳನ್ನು ಮಾತ್ರ ಈ ಲೇಖನಕ್ಕೆ ಅಳವಡಿಸಲಾಗಿದೆ.

### ೧. ಕೋಡ್ಲಾ

ಗುಲಬುರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಕೋಡ್ಲಾ ಅಥವಾ ಕೊರಳಿ ಗ್ರಾಮ ಸೇಡಂದಿಂದ ದಕ್ಷಿಣಭಾಗಕ್ಕೆ ಯಾದಗಿರಿಯ ರಸ್ತೆಯಲ್ಲಿ ೧೭ ಕಿ.ಮೀ. ದೂರದಲ್ಲಿರುತ್ತದೆ. ಈ ಗ್ರಾಮದಲ್ಲಿ ಶ್ರೀ ಉರಿಲಿಂಗಪೆದ್ದೀಶ್ವರ ಮಹಾಸಂಸ್ಥಾನ ಮಠವಿದೆ. ಉಳಿದೆಲ್ಲ ಮಠಗಳಿಗೆ ಕೇಂದ್ರಬಿಂದುವಾಗಿರುವ ಇದರ ಶಾಖೋಪಶಾಖೆಗಳು ಉಳಿದ ಕಡೆಗೆ ಹಬ್ಬಿವೆ. ಶೀ ಉರಿಲಿಂಗಪೆದ್ದೀಶ್ವರ ಗದ್ದುಗೆಯನ್ನು ಸ್ಥಾಪಿಸಿ ನಿರ್ಮಿಸಲಾದ ಈ ಮಠವು ಎಲ್ಲ ಮಠಗಳಿಗಿಂತ ದೊಡ್ಡದಾಗಿರುತ್ತದೆ. ಈ ಮಠವನ್ನು ಸ್ಥಾಪಿಸಿ ಪ್ರಥಮ ಅಧ್ಯಕ್ಷರಾಗಿದ್ದವರು ಶ್ರೀ ನಿ.ಪ್ರ. ಸ್ವ. ಶಿವಯೋಗಿ ಸ್ವಾಮಿಗಳು. ಬೀದರ ಜಿಲ್ಲೆಯ ಬೇವಿನ ಚಿಂಚೋಳಿ ಇವರ ಜನ್ಮಗ್ರಾಮ. ಜಾತಿಯಿಂದ ಹೊಲೆಯರಾಗಿದ್ದ ಇವರ ತಂದೆ ತಾಯಿಗಳು ಅಪ್ಪಣ್ಣ ಮತ್ತು ಕಲ್ಲಮ್ಮ. ಶ್ರೀ ಶಿವಯೋಗಿಗಳ ಮೊದಲ ಹೆಸರು ತುಕಾರಾಮ ಇವರಿಗೆ ಮದುವೆಯೂ ಆಗಿತ್ತು. ಮದುವೆಯಾದ ಒಂದು ವರ್ಷದೊಳಗೆ ತನ್ನ ಪತ್ನಿ ಮರಣಹೊಂದಿದ ಕಾರಣ ಇವರು ಸಂಪೂರ್ಣ ಆಧ್ಯಾತ್ಮದ ಕಡೆಗೆ ತಿರುಗಿದರು. ಇವರ ಮೊದಲ ಗುರು ಶಿವಮ್ಮ. ಎರಡನೆಯ ಗುರು ಚೆನ್ನಬಸಪ್ಪ. ಜಂಗಮ ಓಂಕಾರ ಮಲ್ಲಪ್ಪ ಎಂಬುವರು ಶಿವದೀಕ್ಷೆ ಕೊಟ್ಟು ಶಿವಯೋಗಿಯಾಗೆಂದು ಹರಿಸಿದ ಕಾರಣದಿಂದ ತುಕಾರಾಮ ಹೆಸರಿನ ಇವರು ಶಿವಯೋಗಿಯೆಂದೇ ಪ್ರಸಿದ್ಧರಾಗುತ್ತಾರೆ. ಕರ್ನಾಟಕದಲ್ಲಿ ಎಲ್ಲ ಕಡೆಗೂ ಮಠಗಳು ಸ್ಥಾಪನೆಗೊಳ್ಳುವಲ್ಲಿ ಮತ್ತು ಭಕ್ತರನ್ನು ಕತ್ತಲೆಯಿಂದ ಬೆಳಕಿನತ್ತ ಕೊಂಡೊಯ್ಯುವಲ್ಲಿ ಇವರ ಪಾತ್ರ ದೊಡ್ಡದು. ಇವರು ವಿರಕ್ತ ಪರಂಪರೆಗೆ ಅನುಗುಣವಾಗಿ ಸಂಚಾರಿಗಳಾಗಿದ್ದುದ್ದರಿಂದ ಹೆಚ್ಚು ಜನಸಂಪರ್ಕ ಬಂದು, ಅನೇಕ ಕೆಲಸ ಮಾಡಿದ್ದುಂಟು.

ಇಂದು ನಾಡಿನಾದ್ಯಂತ ಕಂಡು ಬರುವ ಉರಿಲಿಂಗಪೆದ್ದಿ ಮಠಗಳು ಮತ್ತು ಶಾಖೆಗಳು ಇವರ ಪರಿಶ್ರಮದ ಫಲವೆನಿಸಿವೆ. ಆರ್ಥಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ ಬಳಲುತ್ತಿದ್ದ ಹೊಲೆಯರಿಗೆ ಹೊಸದಿಕ್ಕುತೋರಿದವರು ಇವರು. 'ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ' ಎಂಬ ಶರಣವಾಣಿಯಂತೆ ಅಜ್ಞಾನದ ಅಮಲಿನಲ್ಲಿ ಮುಳುಗಿದ್ದ, ಮಾದಕ ವಸ್ತುಗಳ ವ್ಯಸನಕ್ಕೆ ಬಲಿ ಬಿದ್ದು ಒದ್ದಾಡುತ್ತಿದ್ದ ಹೊಲೆಯರನ್ನು ಇವರು ಮೇಲೆತ್ತಿದರು. ದುಶ್ಚಟಗಳಿಗೆ ಅಂಟಿಕೊಂಡಿದ್ದ ಅನೇಕರಿಗೆ ದೀಕ್ಷೆ ನೀಡಿ ಮನುಷ್ಯರನ್ನಾಗಿ ಪರಿವರ್ತಿಸಿದರು.

"ಹೊಲೆಯರಿಗೆ ಲಿಂಗ ಧರಿಸುವ ಅವಕಾಶ ಕಲ್ಪಿಸಿಕೊಡುವುದು ಆ ಕಾಲಕ್ಕೆ ಸಂಪ್ರದಾಯವಾದಿಗಳಿಗೆ ಉದ್ಧಟತನವೆನ್ನಿಸಿತು. ಸಂಪ್ರದಾಯ ಶರಣರೂ, ಉಗ್ರಧರ್ಮನಿಷ್ಠರೂ, ಸಮಯಾಭಿಮಾನಿಗಳೂ ಆದ ಕೆಲವರು (ವೀರಶೈವರು) ಇದನ್ನು ಕಂಡು ಕೆರಳಿದರು.

ಶಿವಯೋಗಿಸ್ವಾಮಿಗಳ ಮೈಮೇಲಿನ ಇಷ್ಟಲಿಂಗವನ್ನು ಕಿತ್ತುಕೊಂಡು ಹೋಗುವವದರ ಮೂಲಕ ಪ್ರಕಟಪಡಿಸಿದರು. ಶ್ರೀ ಶಿವಯೋಗಿಸ್ವಾಮಿಗಳು ಇಷ್ಟಲಿಂಗ ಬರುವವರೆಗೂ ಅನ್ನ ಆಹಾರಾದಿಗಳನ್ನು ಸ್ವೀಕರಿಸುವುದಿಲ್ಲವೆಂದು ಪಣತೊಟ್ಟು ಕುಳಿತರು. ಮೂರು ದಿವಸ ಅವರು ಏನನ್ನೂ ತೆಗೆದುಕೊಳ್ಳಲಿಲ್ಲ. ಕೊನೆಗೆ ಶಿವಯೋಗಿಸ್ವಾಮಿಗಳಿದ್ದಲ್ಲಿಗೆ ಹಳ್ಳಿಯ ಪ್ರಮುಖರು ಬಂದು ಲಿಂಗವನ್ನೊಪ್ಪಿಸಿ, ಆದ ತಪ್ಪನ್ನು ಮರೆತು ಬಿಡುವಂತೆ ಕೇಳಿಕೊಂಡ ಮೇಲೆ ಸ್ವಾಮಿಗಳು ಸ್ನಾನಮಾಡಿ, ಶಿವಪೂಜಾ ನಂತರ ಪ್ರಸಾದ ಸ್ವೀಕರಿಸಿದರು.”೧ ಚಾಮರಾಜನಗರ ತಾಲ್ಲೂಕಿಗೆ ಸೇರಿದ ‘ಬಸವಟ್ಟಿಗೆ’ಯಲ್ಲಿ ಈ ಘಟನೆ ಜರುಗಿತು. ಲಿಂಗವಂತರು ಎಷ್ಟೇ ವಿರೋಧಮಾಡಿದರೂ ಶ್ರೀ ಶಿವಯೋಗಿಸ್ವಾಮಿಗಳು ಧೈರ್ಯಗೆಡದೆ ಹೊಲೆಯರು ಸತ್ಪಥದಲ್ಲಿ ನಡೆಯುವಂತೆ ದಿಕ್ಸೂಚಿಯಾದರು. ಶ್ರೀ ಶಿವಯೋಗಿಗಳು ಹೆಚ್ಚು ಓದಿದವರಲ್ಲ. ವೀರಶೈವಸ್ವಾಮಿಗಳ ಜೊತೆ ತಿರುಗಾಡಿ ಜ್ಞಾನ ಸಂಪಾದಿಸಿಕೊಂಡಿದ್ದರು. ವೀರಶೈವಸ್ವಾಮಿಗಳಿಂದ ಉರಿಲಿಂಗಪೆದ್ದಿ ಚರಿತ್ರೆಯನ್ನು ಅರಿತುಕೊಂಡು ಉರಿಲಿಂಗಪೆದ್ದಿಗಳು ಅಸ್ಪೃಶ್ಯ ಶರಣರಲ್ಲಿ ಮಹಾಮೇಧಾವಿ ಎಂದು ತಿಳಿದು ಈ ಸಂಪ್ರದಾಯದಲ್ಲಿ ಮುನ್ನುಗ್ಗಿ, ಹೊಸ ಪರಂಪರೆಯ ನೇತಾರನೆನಿಸಿಕೊಂಡರು. ಇಂಥ ಸಾಹಸಶೀಲ ವ್ಯಕ್ತಿತ್ವ ಹೊಂದಿದ ಸ್ವಾಮಿಗಳು ‘ದಿನಾಂಕ ೨೬-೬-೧೯೪೭ರಲ್ಲಿ ಲಿಂಗೈಕ್ಯರಾದರು. ಮೈಸೂರಿನ ಗಾಂಧಿನಗರದಲ್ಲಿರುವ ಮನೆಮಂಚಮ್ಮನ ದೇವಸ್ಥಾನದಲ್ಲಿ ಇವರ ಸಮಾಧಿ ಮಾಡಿದರು.”೨

ಶ್ರೀ ಶಿವಯೋಗಿಸ್ವಾಮಿಗಳು ತಮ್ಮ ಜೀವಿತ ಕಾಲದಲ್ಲಿಯೇ ಶ್ರೀ ಗುರುಲಿಂಗಸ್ವಾಮಿಗಳನ್ನು ಕೋಡ್ಲಾಮಠದ ಉತ್ತರಾಧಿಕಾರಿಯನ್ನಾಗಿ ನೇಮಿಸಿದ್ದರು. ಮೂಲತಃ ಹೊಲೆಯರ ಜಾತಿಗೆ ಸೇರಿದ ಇವರ ಜನ್ಮಸ್ಥಳ ಗುಲಬುರ್ಗಾ ಜಿಲ್ಲೆಗೆ ಸೇರಿದ ಶಹಾಪೂರ ತಾಲ್ಲೂಕಿನ ‘ರಾಜಾಪೂರ’. ಇವರು ಕಡಿಮೆ ಅವಧಿಯಲ್ಲಿ ಅನೇಕ ಕಾರ್ಯಗಳನ್ನು ಮಾಡಿದ್ದಾರೆ. ತಮ್ಮ ಸಮಾಜದವರಿಗೆ ಲಿಂಗದೀಕ್ಷೆ ನೀಡಿ ಲಿಂಗಾಯತರನ್ನಾಗಿ ಪರಿವರ್ತಿಸುವಲ್ಲಿ ಇವರ ಪಾತ್ರ ಬಹಳ ಸ್ಮರಣೀಯ. ಗುರುಗಳಾದ ಶ್ರೀ ಶಿವಯೋಗಿಸ್ವಾಮಿಗಳು ಜೀವಂತವಿರುವಾಗಲೇ ಇವರು ಲಿಂಗೈಕ್ಯವಾದರು. ಹೀಗೆ ಗುರುಲಿಂಗಸ್ವಾಮಿಗಳು ಅಕಾಲಿಕ ನಿಧನರಾಗಲು, ಶ್ರೀ ಶಿವಯೋಗಿಸ್ವಾಮಿಗಳು ಕೋಡ್ಲಾ ಮಠದ ಮೂರನೇ ಪೀಠಾಧ್ಯಕ್ಷರನ್ನಾಗಿ ಶ್ರೀ ಮಹಾದೇವಸ್ವಾಮಿಗಳಿಗೆ ಪಟ್ಟಗಟ್ಟಿದರು. ಇವರು ಟಿ. ನರಸಿಪೂರ ತಾಲ್ಲೂಕಿನ ‘ಚಿದರವಳ್ಳಿ’ಯ ನಿವಾಸಿಯಾಗಿದ್ದು, ಜಾತಿಯಿಂದ ಹೊಲೆಯರೇ ಆಗಿದ್ದಾರೆ. ಶ್ರೀ ಶಿವಯೋಗಿಸ್ವಾಮಿಗಳ ಹೆಜ್ಜೆಯಲ್ಲಿ ಹೆಜ್ಜೆಯನ್ನಿಟ್ಟು ಮುನ್ನುಗ್ಗಿದ ಧೀಮಂತ ವ್ಯಕ್ತಿ, ಶ್ರೀ ಮಹಾದೇವ ಸ್ವಾಮಿಗಳು. ಮೈಸೂರು ಭಾಗದಲ್ಲಿ ಮತ್ತು ಕರ್ನಾಟಕದ ಉತ್ತರ ಭಾಗದಲ್ಲಿ ಸುತ್ತಾಡಿ, ಅನೇಕ ಕೇರಿಗಳಿಗೆ ಭೇಟಿ ನೀಡಿ, ಹೊಲೆಯರನ್ನು ಲಿಂಗದೀಕ್ಷೆಯ ಮುಖಾಂತರ ಲಿಂಗವಂತರನ್ನಾಗಿ ಮಾಡುವಲ್ಲಿ ಸಫಲರಾಗಿದ್ದಾರೆ.

ಮಹಾದೇವಸ್ವಾಮಿಗಳು ಕರ್ನಾಟಕದ ದಕ್ಷಿಣಭಾಗದ ಮೈಸೂರು ಪ್ರಾಂತ್ಯದಲ್ಲಿ ಕುಣಗಳ್ಳಿಯ ದೊಡ್ಡ ಬಸಪ್ಪಸ್ವಾಮಿಗಳು, ಮಣಗಳ್ಳಿ ಮಠದ ಅಂಕಪ್ಪಸ್ವಾಮಿಗಳು, ಸತ್ಯಗಾಲದ ಮುದ್ದು ಮಾದಪ್ಪಸ್ವಾಮಿಗಳು ಮುಂತಾದ ಗುರುವರ್ಗದವರಿಗೆ ಲಿಂಗಸಂಸ್ಕಾರವಿತ್ತು, ಅಸ್ಪೃಶ್ಯರ ಉದ್ಧಾರ ಮತ್ತು ಧರ್ಮಪ್ರಚಾರ ಕಾರ್ಯ ಮಾಡುವಂತೆ ಪ್ರೇರೇಪಿಸಿದರು. ಸಂಚಾರಿಗಳಾಗಿದ್ದ ಇವರು, ಭಕ್ತರ ಮನೆಮನೆಗೆ ಹೋಗಿ ಮನಮನಕ್ಕೆ ಬಸವನ ಭಕ್ತಿಸಂದೇಶ ಮುಟ್ಟಿಸುವಲ್ಲಿ ಮುಂದಾದರು.

ಶ್ರೀ ಮಹಾದೇವಸ್ವಾಮಿಗಳ ನಂತರ ನಲ್ಕನೇ ಪೀಠಾಧ್ಯಕ್ಷರು ಶ್ರೀ ನಿ.ಪ್ರ.ಸ್ವ. ನಂಜುಡೇಶ್ವರ ಸ್ವಾಮಿಗಳು. ಇವರು ‘ಕುಪ್ಪೇಗಾಲ’ (ಮೈಸೂರು)ದಲ್ಲಿ ದಿನಾಂಕ:೨೫-೫-೧೯೪೧ರಂದು ಚಿಕ್ಕನಂಜಯ್ಯ ಹಾಗೂ ಚೌಡಮ್ಮ ದಂಪತಿಗಳ ಉದರದಲ್ಲಿ ಮೂರನೇ ಮಗುವಾಗಿ ಜನಿಸಿದರು. ದುದ್ದಗೆರೆ ಮಠದ ಅಧ್ಯಕ್ಷರಾಗಿದ್ದ ಶ್ರೀಸಿದ್ಧಪ್ಪ ಸ್ವಾಮಿಗಳು ಇವರ ದೊಡ್ಡಪ್ಪನವರಾಗಬೇಕು.

ಮಹಾದೇವಸ್ವಾಮಿಗಳು ಭಕ್ತರ ಮನೆಗೆ ಹೋದಾಗ ಬಾಲಕ ನಂಜುಂಡಯ್ಯನವರ ಮುಖಾಮುಖಿ ಭೇಟಿಯಾಯಿತು. ಆ ಬಾಲಕನ ಪ್ರಸನ್ನತೆಯನ್ನು ನೋಡಿ ಹಸ್ತಮಸ್ತಕ ಸ್ಪರ್ಶದಿಂದ ಮಾತನಾಡಿದರು. ತಮ್ಮ ಉತ್ತರಾಧಿಕಾರಿಯನ್ನಾಗಿ ಮಾಡಿಕೊಳ್ಳಲು ಸಂಕಲ್ಪಿಸಿ, ತಮ್ಮ ಮನೋಭಿಷ್ಟವನ್ನು ಬಾಲಕನ ತಂದೆ–ತಾಯಿಗಳಿಗೆ ಅರುಹಿದರು. ಅವರು ಸಂತೋಷದಿಂದ ಸಮಾಜಕ್ಕಾಗಿ, ಧರ್ಮಕ್ಕಾಗಿ ಮಗನನ್ನು ಧಾರೆಯೆರೆದರು. ಬಾಲಕ ನಂಜುಂಡಯ್ಯನವರು ಶಹಾಪೂರದಲ್ಲಿ ಬಿ.ಎ. ವರೆಗೆ, ಮೈಸೂರಿನಲ್ಲಿ ಎಂ.ಎಂ. ವರೆಗೆ ಓದಲು ಶ್ರೀಗಳು ನೆರವಾದರು. ಧಾರವಾಡದ ಮುರುಘಾಮಠದಲ್ಲಿ ನಡೆಯುತ್ತಿದ್ದ ಶಿವಾನುಭವ ತರಬೇತಿಗೆ ಸೇರಿಸಿದರು. ಎಲ್ಲ ರಂಗಗಳಲ್ಲಿಯೂ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ ನಂಜುಂಡಯ್ಯನವರು ‘ವೀರಶೈವ ಧರ್ಮಪ್ರಚಾರಕ’ ಎಂಬ ಬಿರುದು ಸಂಪಾದಿಸಿ, ತಮ್ಮ ಗುರುಗಳಿಗೆ ನೆಮ್ಮದಿ ನೀಡಿದರು. ಇದರಿಂದ ಸಂತೃಪ್ತರಾದ ಶ್ರೀ ನಿ.ಪ್ರ.ಸ್ವ. ಮಹಾದೇವಸ್ವಾಮಿಗಳು ಇವರ ಕೈಯಿಂದು ‘ಶ್ರೀ ಶಿವಯೋಗಿಸ್ವಾಮಿ ವಿದ್ಯಾವರ್ಧಕ ಸಂಸ್ಥೆ’ ಸ್ಥಾಪನೆಗೊಳಿಸುವಂತೆ ಮಾಡಿದರಲ್ಲದೆ, ಅನೇಕ ಕಾಲೇಜು, ಅನಾಥಾಲಯ, ವಿದ್ಯಾರ್ಥಿನಿಲಯಗಳು ಅಸ್ತಿತ್ವಕ್ಕೆ ಬರುವಂತೆ ಪ್ರೇರೇಪಿಸಿದರು.

ಶ್ರೀ ಮಹಾದೇವಸ್ವಾಮಿಗಳು ಕ್ರಿ.ಶ. ೧೯೮೫ರಲ್ಲಿ ಲಿಂಗೈಕ್ಯವಾದಾಗ, ಸಕಲ ಶಾಖಾ ಮಠಾಧೀಶರು ಸೇರಿ ಅದೇ ವರ್ಷ ಅವರ ಉತ್ತರಾಧಿಕಾರಿಯನ್ನಾಗಿ ಶ್ರೀ ನಂಜುಂಡೇಶ್ವರಸ್ವಾಮಿಗಳನ್ನು ನಿಯೋಜಿಸಿದರು. ಇವರು ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ ವಿದ್ಯಾವರ್ಧಕ ಸಂಸ್ಥೆಯನ್ನು ಪುನರುಜ್ಜೀವನಗೊಳಿಸಿ, ಉರಿಲಿಂಗಪೆದ್ದಿಮಠವೆಂಬ ನಾಮವನ್ನು ‘ಶ್ರೀ ಉರಿಲಿಂಗಪೆದ್ದೀಶ್ವರ ಮಹಾಸಂಸ್ಥಾನಮಠ’ವೆಂದು ಬದಲಿಸಿ ಉಳಿದ ಭಾಗಗಳಲ್ಲೆಲ್ಲ ಶಾಖಾ ಮಠಗಳನ್ನು ಸ್ಥಾಪಿಸಿ, ಮಠಾಧಿಪತಿಗಳನ್ನು ನೇಮಿಸಿದರು. ಜೊತೆಗೆ ಅವರಿಗೆ ಶ್ರೀ ಉರಿಲಿಂಗಪೆದ್ದೀಶ್ವರ ಮಹಾಸಂಸ್ಥಾನಮಠ (ಕೋಡ್ಲಾ)ದಿಂದ ಪ್ರಮಾಣವಚನ ಬೋಧಿಸಿ, ಪ್ರಮಾಣಪತ್ರಗಳನ್ನು ನೀಡಿದರು.

ಪ್ರತಿವರ್ಷ ೨೫ ರಿಂದ ೫೦ ಜನ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಶಿವಾನುಭವ ತರಬೇತಿ ನೀಡುವ ‘ಗುರುಕುಲ’ ತೆರೆದಿದ್ದಾರೆ. ಇದರಿಂದ ಮುಂದಿನ ಉತ್ತರಾಧಿಕಾರಿಗಳಾಗಲು ಅನುಕೂಲವಾಗುವುದೆಂಬ ಭಾವನೆ ಇವರದು. ಈಗ ಶ್ರೀ ನಂಜುಂಡೇಶ್ವರ ಸ್ವಾಮಿಗಳಿಗೆ ೬೨ ವರ್ಷಗಳಾದರು ಎಡಬಿಡದೆ ಕೆಲಸ ಮಾಡುತ್ತಿರುತ್ತಾರೆ. ಕೋಡ್ಲಾಮಠದಲ್ಲಿಯೇ ಇವರ ವಾಸಸ್ಥಾನ. ಕೋಡ್ಲಾದ ಹೊಲಗೇರಿಯ ಎಪ್ಪತ್ತೈದು ಎಂಬತ್ತು ಮನೆಗಳಲ್ಲಿ ಸುಮಾರು ೪೫೦ ರಿಂದ ೫೦೦ ಜನರನ್ನು ಲಿಂಗಧಾರಿಗಳನ್ನಾಗಿ ಪರಿವರ್ತಿಸಿದ್ದಾರೆ.

ವರ್ಷದಲ್ಲಿ ಒಮ್ಮೆಯಾದರೂ ಕರ್ನಾಟಕದಾದ್ಯಂತ ಹಬ್ಬಿರುವ ತಮ್ಮ ಶಾಖಾಮಠಗಳಿಗೆ ಶ್ರೀಗಳು ಭೇಟಿ ನೀಡುತ್ತಾರೆ. ಧರ್ಮಬೋಧನೆ, ಅಸ್ಪೃಶ್ಯತೆ ನಿವಾರಣೆಯಂತಹ ಮಹತ್ಕಾರ್ಯಗಳು ಅತಿಮುಖ್ಯವೆಂದು ನಂಬಿರುವ ಇವರು, ಶುದ್ಧ ಸಸ್ಯಾಹಾರಿಗಳಾಗಿದ್ದು ಅಸ್ಪೃಶ್ಯರೊಂದಿಗೆ ಸಹ ಊಟೋಪಚಾರಗಳಲ್ಲಿ ಭಾಗವಹಿಸುವರು. ಜನನ–ಮರಣ ಕಾರ್ಯಗಳನ್ನು ಶರಣಸಂಪ್ರದಾಯದಂತೆ ಮುಂದುವರಿಸಿರುವರು. ಇವರು ‘ವಿಶ್ವಬಸವ ಸಂಪ್ರದಾಯ ಪರಿಷತ್’ ಹೆಸರಿನ ಸಂಸ್ಥೆಯನ್ನು ಸ್ಥಾಪಿಸಿ, ಅದರ ಅಧ್ಯಕ್ಷರಾಗಿ ದುಡಿಯುತ್ತಲಿದ್ದಾರೆ. ‘ಬಸವ ಪ್ರಮಥ’ ಹೆಸರಿನ ಮಾಸ ಪತ್ರಿಕೆಯನ್ನು ಇವರು ಆರಂಭಿಸಿದ್ದರು. ಪಂಚಾಚಾರ ಅಷ್ಟಾವರಣ ಷಟ್‌ಸ್ಥಲ ತತ್ವಗಳು ಈ ಮಠದಲ್ಲಿ

ಅನುಷ್ಠಾನದಲ್ಲಿವೆ. ಮಠದ ಉತ್ತರಾಧಿಕಾರಿಗಳನ್ನು ಪುತ್ರಸಂಪ್ರದಾಯದಿಂದಲ್ಲ, ಶಿಷ್ಯಪರಂಪರೆಯಂತೆ ನಿಯೋಜಿಸುತ್ತಿದ್ದಾರೆ. ಇಷ್ಟಲಿಂಗವೇ ಇವರ ದೈವ. ಸಮಾಜಸೇವೆ ಮಾಡುವುದೇ ಇವರ ವೃತ್ತಿ. ಇವರದೇ ಆದ ಪಂಚಾಯತಿ ವ್ಯವಸ್ಥೆ ಇಲ್ಲ. ಯಾವುದೇ ರಾಜಕೀಯ ಪಕ್ಷದಲ್ಲಿ ಸೇರಲು ಇಚ್ಛಿಸುವುದಿಲ್ಲ. ಆಳುವ ವರ್ಗವಾಗಲು ಬಯಸುವುದಿಲ್ಲ.*

**೨. ಗುಂಡಗುರ್ತಿ**

ತಾಲ್ಲೂಕು ಕೇಂದ್ರ ಚಿತ್ತಾಪೂರದಿಂದ ವಾಯವ್ಯಕ್ಕೆ ೧೨ ಕಿ.ಮೀ. ವಾಡಿಯಿಂದ ಉತ್ತರಕ್ಕೆ ೨೦ ಕಿ.ಮೀ. ದೂರದ ಈ ಗ್ರಾಮದಲ್ಲಿ ಸುಮಾರು ೩೦ ವರ್ಷಗಳ ಹಿಂದೆ ಶ್ರೀ ಉರಿಲಿಂಗಪೆದ್ದೀಶ್ವರ ಶಾಖಾಮಠವನ್ನು ಮಾತೆ ದೇವಮ್ಮ ತಾಯಿಯವರು ಸ್ಥಾಪಿಸಿದ್ದಾರೆ. ಇವರಿಗೆ ೬೦ ವರ್ಷ ವಯಸ್ಸಾದರೂ ಶ್ರದ್ಧೆಯಿಂದ ಸಮಾಜ ಸೇವೆಗೈಯುತ್ತಿದ್ದಾರೆ. ಇವರನ್ನು ಕೋಡ್ಲಾ ಮಠದವರು ನೇಮಕ ಮಾಡಿರುತ್ತಾರೆ. ಮಣ್ಣಿನ ಮಾಳಿಗೆಯ ಮಠವಾಗಿದ್ದು ೭೦ ಜನ ಕುಳಿತುಕೊಳ್ಳುವಷ್ಟು ದೊಡ್ಡದಾಗಿರುತ್ತದೆ. ಇವರು ತಮ್ಮ ಕುಟುಂಬ ಬಿಟ್ಟು ಒಬ್ಬರೇ ಮಠದಲ್ಲಿರುತ್ತಾರೆ.

ಗುಂಡಗುರ್ತಿಯಲ್ಲಿಯ ಸುಮಾರು ೧೫೦ ಜನರನ್ನು ಲಿಂಗದೀಕ್ಷೆಯಿಂದ ಲಿಂಗಾಯತರಾಗಿ ಪರಿವರ್ತಿಸಿದ್ದಾರೆ. ಶುಭಾಶುಭ ಕಾರ್ಯಗಳನ್ನು ಮಹಾಸಂಸ್ಥಾನಮಠ ಕೋಡ್ಲಾದಿಂದ ಬಂದು ಶ್ರೀ ನಂಜುಂಡೇಶ್ವರಸ್ವಾಮಿಗಳು ನೆರವೇರಿಸುತ್ತಾರೆ. ಶಿಷ್ಯಸಂಪ್ರದಾಯದ ಮಠ ಇದಾಗಿದೆ. ಅಸ್ಪೃಶ್ಯರನ್ನು ಮೇಲೆತ್ತುವುದೇ ತಮ್ಮ ಮುಖ್ಯ ಗುರಿಯನ್ನಾಗಿಸಿಕೊಂಡಿದ್ದು, ಭಿಕ್ಷೆಯೊಂದಿಗೆ ತಮ್ಮ ಹೊಲದಲ್ಲಿಯೂ ಕೆಲಸ ಮಾಡುವುದುಂಟು. ಇಲ್ಲಿ ಸ್ತ್ರೀಯರಿಗೆ ಪುರುಷರಷ್ಟೇ ಸಮಾನ ಅವಕಾಶವಿರುವುದು ಗಮನಿಸತಕ್ಕ ಸಂಗತಿಯಾಗಿದೆ.

**೩. ಟೆಂಗಳಗಿ**

ತಾಲ್ಲೂರು ಕೇಂದ್ರವಾದ ಚಿತ್ತಾಪೂರದಿಂದ ಈಶಾನ್ಯ ದಿಕ್ಕಿಗೆ ಸುಮಾರು ೧೩. ಕಿ.ಮೀ. ದೂರದಲ್ಲಿ ಟೆಂಗಳಗಿ ಇದೆ. ಭೀಮಾನದಿಯ ದಡದಲ್ಲಿರುವ ಇಲ್ಲಿಯ ಶ್ರೀ ಉರಿಲಿಂಗಪೆದ್ದೀಶ್ವರ ಮಠವು ಸುಮಾರು ೬೦ ವರ್ಷಗಳ ಇತಿಹಾಸ ಹೊಂದಿದೆ. ಕೋಡ್ಲಾ ಮಠದ ಸಂಸ್ಥಾಪಕರಾದ ಶ್ರೀ ಶಿವಯೋಗಿಸ್ವಾಮಿಗಳು ಈ ಮಠದ ಸಂಸ್ಥಾಪಕರು. ಇವರ ನಂತರ ಶ್ರೀ ಮಹಾದೇವಸ್ವಾಮಿಗಳು ಅಧಿಕಾರ ವಹಿಸಿಕೊಂಡಿದ್ದರು. ನಂತರ ಶೀ ಕೃಷ್ಣಯ್ಯ ಸ್ವಾಮಿಗಳು. ಈಗ ಗುರುಲಿಂಗಸ್ವಾಮಿಗಳು ಪೀಠಾಧಿಕಾರಿಗಳು.

ಈ ಸ್ವಾಮಿಗಳ ಪೂರ್ವದಲ್ಲಿದ್ದವರು ಶ್ರೀ ಕೃಷ್ಣಯ್ಯಸ್ವಾಮಿಗಳು. ಇವರು ಸಂಸಾರತ್ಯಾಗ ಮಾಡಿ ಮಠದಲ್ಲಿಯೇ ಇದ್ದರು. ಗೋತ್ರ–ಮೂಢ ನಂಬಿಕೆಗಳನ್ನು ಧಿಕ್ಕರಿಸಿ, ಶರಣ ಸಂಸ್ಕೃತಿಯನ್ನು ಮೆರೆಯುತ್ತಿದ್ದೂ, ಬೆಳಿಗ್ಗೆ ಎದ್ದು ಜೋಳಿಗೆಯೊಂದಿಗೆ ತಮ್ಮ ಸಂಪ್ರದಾಯದವರ ಮತ್ತು ಸವರ್ಣೀಯರ ಮನೆಯ ಮುಂದೆ ಹೋಗಿ ಭಿಕ್ಷೆ ಬೇಡುತ್ತಿದ್ದರು. ಭಿಕ್ಷೆ ನೀಡಲು ಬಂದ ಮನೆಯವರ ನೊಸಲಿಗೆ ವಿಭೂತಿ ಹಚ್ಚಿ, ಮುಂದೆ ಸಾಗುತ್ತಿದ್ದರು. ಶ್ರಾವಣ ಮಾಸದಲ್ಲಿ ಒಂದು ತಿಂಗಳ ಕಾಲ ಶ್ರೀಮಠದಲ್ಲಿ ಭಜನೆ ನಡೆಸುವುದುಂಟು. ಹಾಗೆಯೇ ಪ್ರತಿ ಸೋಮವಾರಕ್ಕೊಮ್ಮೆ ಭಜನೆ ಮಾಡುತ್ತಾರೆ. ಇಷ್ಟಲಿಂಗವೇ ದೈವವೆಂದು ತಿಳಿದ ಶರಣಜೀವಿ ಕೃಷ್ಣಯ್ಯನವರು ಅಕಾಲಿಕ ಲಿಂಗೈಕ್ಯರಾದ ನಂತರ ಈ ಮಠದ ಅಧಿಕಾರವನ್ನು ಶ್ರೀ ಗುರುಲಿಂಗಸ್ವಾಮಿಗಳು ವಹಿಸಿಕೊಂಡಿದ್ದಾರೆ.

**೪. ಹೊನಗುಂಟಾ**

ತಾಲ್ಲೂಕು ಕೇಂದ್ರವಾದ ಚಿತ್ತಾಪೂರದಿಂದ ನೈಋತ್ಯಕ್ಕೆ ೨೭ ಕಿ.ಮೀ. ಅಂತರದಲ್ಲಿರುವ ಹೊನಗುಂಟಾ ಗ್ರಾಮವು ವಾಡಿ ರೈಲುನಿಲ್ದಾಣದಿಂದ ಪಶ್ಚಿಮಕ್ಕೆ ೧೦ ಕಿ.ಮೀ. ದೂರದಲ್ಲಿ, ಕಾಗಿಣಾ ನದಿಯ ಬಲದಂಡೆಯ ಮೇಲಿದೆ. ಇಲ್ಲಿಯ ಶ್ರೀ ಉರಿಲಿಂಗಪೆದ್ದೀಶ್ವರ ಮಠವು ಸುಮಾರು ೨೫೦ ವರ್ಷಗಳ ಪ್ರಾಚೀನತೆ ಹೊಂದಿದೆ. ಹೊಲಗೇರಿಯಲ್ಲಿರುವ ಈ ಮಠವು ಶಹಬಾದಿ ಕಲ್ಲಿನಿಂದ ರಚನೆಗೊಂಡಿರುತ್ತದೆ. ಮಠ ಸ್ಥಾಪನೆಗೊಂಡ ಮೇಲೆ ಶ್ರೀ ಪರ್ವತಯ್ಯಸ್ವಾಮಿಗಳು ಅಧಿಕಾರಿಗಳಾಗಿದ್ದರು. ಎರಡನೆಯವರು ಶ್ರೀ ಶಾಂತವೀರ ಸ್ವಾಮಿಗಳು, ಮೂರನೆಯವರು ಶ್ರೀ ರಾಮಲಿಂಗಸ್ವಾಮಿಗಳು, ನಾಲ್ಕನೆಯವರು ಶ್ರೀ ಶಿವಯ್ಯಸ್ವಾಮಿಗಳು, ಐದನೆಯವರು ಅಂದರೆ, ಈಗ ಪೀಠಾಧಿಕಾರಿಗಳಾಗಿದ್ದವರು ಶ್ರೀ ನಾಗಪ್ಪಸ್ವಾಮಿಗಳು. ಈ ಐದೂ ಜನ ಸ್ವಾಮಿಗಳು ಜಾತಿಯಿಂದ ಹೊಲೆಯರು.

ಹೊನಗುಂಟಾದ ಸುಮಾರು ೫೦ ಕುಟುಂಬದ ೪೦೦ಕ್ಕೂ ಹೆಚ್ಚು ಜನರನ್ನು ಶರಣಪಥದಲ್ಲಿ ಹೆಜ್ಜೆಯಿಡುವಂತೆ ಮಾಡಿದ್ದಾರೆ. ಶಿಷ್ಯಪರಂಪರೆಯ ಆಧಾರದ ಮೇಲೆ ಮಠದ ಉತ್ತರಾಧಿಕಾರಿಯನ್ನು ನೇಮಿಸುವ ವಾಡಿಕೆಯಿಲ್ಲಿದೆ. ಹುಟ್ಟು–ಸಾವು, ಮದುವೆ ಎಲ್ಲ ಪ್ರಮುಖ ಕಾರ್ಯಕ್ರಮಗಳು ಶರಣ ಸಂಸ್ಕೃತಿಯ ಪ್ರಕಾರವೇ ಜರುಗುತ್ತವೆ. ಮದುವೆಯಂತಹ ಶುಭಕಾರ್ಯದಲ್ಲಿ ಕೋಡ್ಲಾ ಮಹಾಸಂಸ್ಥಾನಮಠದಿಂದ ಸ್ವಾಮಿಗಳನ್ನು ಬರಮಾಡಿಕೊಳ್ಳುವರು.

**೫. ಹುರಸಗುಂಡಗಿ**

ತಾಲ್ಲೂಕು ಸ್ಥಳ ಶಹಾಪುರದಿಂದ ಈಶಾನ್ಯಕ್ಕೆ ೧೬ ಕಿ.ಮೀ. ಶಿರವಾಳದಿಂದ ಪೂರ್ವ ಭಾಗಕ್ಕೆ ಎರಡು ಕಿ.ಮೀ. ದೂರದಲ್ಲಿ ಭೀಮಾನದಿಯ ಬಲದಂಡೆಯ ಮೇಲಿರುವ ಐತಿಹಾಸಿಕ ಸ್ಥಳವಾಗಿದೆ, ಈ ಹುರಸಗುಂಡಗಿ. ಶ್ರೀ ಉರಿಲಿಂಗಪೆದ್ದೀಶ್ವರ ಮಠವು ಸುಮಾರು ೨೫ ವರ್ಷಗಳ ಹಿಂದೆ ಇಲ್ಲಿ ಆರಂಭಗೊಂಡಿದೆ. ಆರಂಭದಲ್ಲಿ ಮಹಾದೇವಸ್ವಾಮಿಗಳು ಈ ಮಠದ ಕಾರ್ಯಗಳನ್ನು ನೋಡಿಕೊಳ್ಳುತ್ತಿದ್ದರು. ನಂತರ ೮೦ ವರ್ಷ ವಯಸ್ಸಿನ ಹುಸೇನಪ್ಪಸ್ವಾಮಿಗಳು ನೋಡಿಕೊಳ್ಳುತ್ತಿದ್ದರು. ಇವರು ಅಕಾಲಿಕ ಲಿಂಗೈಕ್ಯವಾದ್ದರಿಂದ ಈಗ ಕೋಡ್ಲಾ ಮಠದ ಶ್ರೀ ನಂಜುಂಡೇಶ್ವರ ಸ್ವಾಮಿಗಳು ನೋಡಿಕೊಳ್ಳುತ್ತಾರೆ.

ಮಾಳಿಗೆಯ ಮನೆಯಂತೆ ಮಠವಿದೆ. ಮೂರು ಕೋಣೆ–ಹೀಗೆ ಇದರ ಸ್ವರೂಪವಾಗಿದೆ. ಹುರಸಗುಂಡಗಿಯಲ್ಲಿರುವ ೧೫೦ ಅಸ್ಪೃಶ್ಯರ ಮನೆಗಳ ಸುಮಾರ ೫೦೦ ಜನರನ್ನು ಲಿಂಗದೀಕ್ಷೆ ನೀಡಿ ಪರಿವರ್ತಿಸಿ, ಅಸ್ಪೃಶ್ಯರನ್ನು ಅನೇಕ ದುಶ್ಚಟಗಳಿಂದ ವಿಮುಕ್ತಗೊಳಿಸಿದ್ದರು, ಹುಸೇನಪ್ಪಸ್ವಾಮಿಗಳು. ಈ ಮಠದ ಹೆಸರಿಗೆ ಭೂಮಿ ಇರುವುದಿಲ್ಲ. ಭಿಕ್ಷೆಯನ್ನು ಹೊರತುಪಡಿಸಿದರೆ ಬೇರೆ ಯಾವ ಆದಾಯವೂ ಬರುವಂತಿಲ್ಲ.

**೬. ಯಾದಗಿರಿ**

ಜಿಲ್ಲಾ ಸ್ಥಳವಾದ ಗುಲಬುರ್ಗಾದಿಂದ ಆಗ್ನೇಯಕ್ಕೆ ೮೦ ಕಿ.ಮೀ. ದೂರದಲ್ಲಿ ಭೀಮಾ ನದಿಗೆ ೨ ಕಿ.ಮೀ. ಅಂತರದಲ್ಲಿ ಯಾದಗಿರಿ ಇದೆ. ಶ್ರೀ ಉರಿಲಿಂಗಪೆದ್ದೀಶ್ವರ ಶಾಖಾಮಠವು ತಾಲ್ಲೂಕು ಕೇಂದ್ರವಾದ ಈ ಗ್ರಾಮದಲ್ಲಿ ಸುಮಾರು ೨೫ ವರ್ಷಗಳಷ್ಟು ಹಿಂದೆ ಸ್ಥಾಪನೆಗೊಂಡಿದೆ. ಈ ಮಠದ ಸಂಸ್ಥಾಪಕರು ಹೊನಗುಂಟಾದ ಪರ್ವತಯ್ಯ ಸ್ವಾಮಿಗಳು. ಈ ಮಠದ ಇಂದಿನ ಉತ್ತರಾಧಿಕಾರಿಗಳು ಶ್ರೀ ಶಾಂತವೀರ ಸ್ವಾಮಿಗಳು. ಭಿಕ್ಷೆ ಬೇಡಿ ಜೀವಿಸುವ ಇವರ ಮನೆಯೇ ಮಠವಾಗಿದ್ದು, ಮೇಲೆ ತಗಡುಗಳ ಹೊದಿಕೆಯಿದೆ. ಅವಿಭಕ್ತ ಸ್ವರೂಪದ ಕುಟುಂಬ ಹೊಂದಿದ ಇವರ ಮನೆಯಲ್ಲಿ ಏಳು ಜನರು ವಾಸಿಸುತ್ತಾರೆ. ಮಗು ಜನಿಸಿದಾಗ ವಿಭೂತಿಧಾರಣೆ ಮಾಡಿ ಗುರುಗಳನ್ನು ಮನೆಗೆ ಕರೆತಂದು, ಶರಣ ಸಂಸ್ಕೃತಿಯ ಪ್ರಕಾರ ಮಗುವಿನ ನಾಮಕರಣ ಸಮಾರಂಭ ನೆರವೇರಿಸುವರು. ಶ್ರೀ

ಉರಿಲಿಂಗಪೆದ್ದಿ ಸಂಪ್ರದಾಯದವರೊಂದಿಗೆ ಮಾತ್ರ ಊಟೋಪಚಾರಗಳನ್ನು ನಡೆಸುವರು. ಶುದ್ಧ ಶಾಕಾಹಾರಿಗಳಾದ ಕಾರಣ ಇವರು ಬೇರೆಯವರ ಜೊತೆ ಭೋಜನ ಮಾಡುವುದಿಲ್ಲ. ಯಾದಗಿರಿಯ ಸುಮಾರು ೫೦ ಹೊಲೆಯರ ಮನೆಗಳ ೧೫೦ ಜನರಿಗೆ ಲಿಂಗದೀಕ್ಷೆ ನೀಡಿ ಧರ್ಮಮಾರ್ಗದಲ್ಲಿ ನಡೆಯುವಂತೆ ಪ್ರೇರೇಪಿಸಿದ್ದಾರೆ. ಹರಕೆ ಮತ್ತು ಬಲಿಗಳ ಬಗ್ಗೆ ನಂಬಿಕೆ ಇರುವುದಿಲ್ಲ.

ಈ ಮಠದ ಅಧ್ಯಕ್ಷರು ಶ್ರೀ ಸಿ. ನಂಜಯ್ಯಸ್ವಾಮಿಗಳು. ಇವರು ವ್ಯವಸಾಯ ಮಾಡಿಕೊಂಡು ಬದುಕುತ್ತಿದ್ದಾರೆ. ಶ್ರೀ ಸಣ್ಣಪುಟ್ಟಯ್ಯ ಸ್ವಾಮಿಗಳಿಂದ ಲಿಂಗದೀಕ್ಷೆ ಪಡೆದುಕೊಂಡ ಇವರು, ತಮ್ಮ ಕೈಯಿಂದ ಸಾಧ್ಯವಾದಷ್ಟು ಅಸ್ಪೃಶ್ಯರನ್ನು ಪರಿವರ್ತಿಸುವ ಕಾರ್ಯದಲ್ಲಿ ತಲ್ಲೀನರಾಗಿದ್ದಾರೆ. ಶುದ್ಧ ಸಸ್ಯಹಾರಿಗಳಾಗಿದ್ದು, ವೀರಶೈವರ ಆಚರಣೆಗಳನ್ನು ಪಾಲಿಸುತ್ತಾರೆ. ವೀರಶೈವ ಭಕ್ತರ ಮನೆಯಲ್ಲಿ ಮಾತ್ರ ಊಟೋಪಚಾರಗಳನ್ನು ಮಾಡುವುದುಂಟು. ಮನೆಯಲ್ಲಿಯ ಶುಭಕಾರ್ಯಕ್ಕೆ ಮೈಸೂರಿನಿಂದ ಸ್ವಾಮಿಗಳನ್ನು ಕರೆತರುವರು. ಹಿರಿಯ ಸ್ವಾಮಿಗಳ ನೇತೃತ್ವದಲ್ಲಿಯೇ ಇಂಥ ಕಾರ್ಯಗಳು ನೆರವೇರುತ್ತವೆ. ಇವರು ಭಿಕ್ಷೆ ಬೇಡುವುದಿಲ್ಲ. ವ್ಯವಸಾಯ ಮೂಲದಿಂದ ಪ್ರತಿವರ್ಷ ಸುಮಾರು ೪೦ ರಿಂದ ೫೦ ಸಾವಿರ ರೂ. ಮೌಲ್ಯದ ಬೆಳೆ ತೆಗೆಯುವರು.

ಮೇಲೆ ಹೇಳಿದ ಮಠಗಳ ಉತ್ತರಾಧಿಕಾರಿಗಳಲ್ಲಿ ಬಹಳ ಜನ ಪರಸ್ಪರ ರಕ್ತಸಂಬಂಧಿಗಳಾಗಿದ್ದಾರೆ. ಮೂಲತಃ ಶಿಷ್ಯವರ್ಗದ ಮಠಗಳಾಗಿದ್ದರೂ ಕ್ರಮೇಣ ಇವು ಈಗ ಸಂಸಾರಿಮಠಗಳಾಗುತ್ತಲಿವೆ. ತ್ರಿಪುರಾಂತದ ಉರಿಲಿಂಗಪೆದ್ದಿ ಮಠದ ಉತ್ತರಾಧಿಕಾರಿ ಪಂಚಾಕ್ಷರಿಯವರ ಮಗಳನ್ನು ಭಾಲ್ಕಿಯ ಉರಿಲಿಂಗಪೆದ್ದಿ ಮಠದ ರಾಮಲಿಂಗನಿಗೆ ವಿವಾಹ ಮಾಡಿಕೊಟ್ಟಿದ್ದಾರೆ. ಅಂದರೆ ಭಾಲ್ಕಿಯಲ್ಲಿರುವ ಸ್ವಾಮಿ ಇವರ ಅಳಿಯ. ಇದೇ ರೀತಿ ಮುಚಳಂಬಿ, ಬೇಲೂರು ಮಠಗಳಲ್ಲಿ ಪಂಚಾಕ್ಷರಿಯ ತಮ್ಮಂದಿರಿದ್ದಾರೆ. ಶತಶತಮಾನಗಳಿಂದ ಅಂಟಿಕೊಂಡಿದ್ದ ಜಾತಿಯ ಜಾಡ್ಯ ಬಿಡಿಸಿಕೊಳ್ಳಲು ೧೨ ನೆಯ ಶತಮಾನದಲ್ಲಿ ಸಾವಿರಾರು ಜನ ಹೊಲೆಯರು ವೀರಶೈವಧರ್ಮವನ್ನು ಸ್ವೀಕರಿಸಿದರು. ಹಿಂದೂಧರ್ಮದ ಅಸಮಾನತೆ, ಮೌಢ್ಯತೆಗಳಿಗೆ ಹೆದರಿ ತಮ್ಮ ವಿಮೋಚನೆಯ ಮಾರ್ಗವನ್ನು ವೀರಶೈವರಲ್ಲಿ ಹುಡುಕಿಕೊಂಡರು.

ಆದರೆ ಇಂದಿನ ವೀರಶೈವರು ಇವರನ್ನು ಅಪ್ಪಿಕೊಳ್ಳುತ್ತಾರೆಯೇ? ಒಪ್ಪಿಕೊಳ್ಳುತ್ತಾರೆಯೇ? ರಕ್ತಸಂಬಂಧ ಬೆಳೆಸುತ್ತಾರೆಯೇ? ಇತ್ಯಾದಿ ಪ್ರಶ್ನೆಗಳಿಗೆ ಲಿಂಗಾಯತರಲ್ಲಿ ಉತ್ತರ ದೊರೆಯುವುದಿಲ್ಲ. 'ದೇವರೋ ಅಥವಾ ಯಾರೋ ಅತಿ ಮಾನವರು ನಿಮ್ಮ ಗುಲಾಮಗಿರಿಯನ್ನು ನಿರ್ಮೂಲನೆ ಮಾಡುವುದಿಲ್ಲ. ನಿಮ್ಮ ಗುಲಾಮಗಿರಿಯನ್ನು ನೀವೇ ನಿರ್ಮೂಲನೆ ಮಾಡಿಕೊಳ್ಳಬೇಕು. ನಿಮ್ಮ ವಿಮೋಚನೆಯು ರಾಜಕೀಯ ಅಧಿಕಾರದಲ್ಲಿಯೇ ವಿನಃ ತೀರ್ಥಯಾತ್ರೆ ಮತ್ತು ವ್ರತಾಚಾರಣೆಗಳಲ್ಲಿ ಅಲ್ಲ' ಎಂದು ಡಾ. ಬಾಬಾಸಾಹೇಬ ಅಂಬೇಡ್ಕರ ಅವರು ಹೇಳಿದುದು, ಈ ಸಂದರ್ಭದಲ್ಲಿ ಸ್ಮರಣೆಗೆ ಬರುತ್ತದೆ.

**ಪರಾಮರ್ಶನ**


೧. ಡಾ. ಎಸ್. ವಿದ್ಯಾಶಂಕರ, 'ವಚನಾನುಶೀಲನ' ಪು. ೩೮೨

೨. ಅದೇ. ಪು. ೩೮೩

೩. ಕೋಡ್ಲಾ ಮಠದ ಕ್ಷೇತ್ರಕಾರ್ಯಕ್ಕೆ ಹೋದ ಸಂದರ್ಭದಲ್ಲಿ ಶ್ರೀ ನಂಜುಂಡೇಶ್ವರಸ್ವಾಮಿಗಳ ಜೊತೆ ಚರ್ಚಿಸಿ, ಸಂಗ್ರಹಿಸಿದ ವಿಷಯ. ೧೯೯೭-೯೮